**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 1957/2020**

| | | | |
|---|---|---|---|
| **ಹೆಸರು** | **:** | **ವೆಂಕಟೇಶ** | **ಚಾ.ಸಾ. 9** |
| **ತಂದೆಯ ಹೆಸರು** | **:** | **ಚಂದ್ರಪ್ಪ** | **ಪ್ರಾ.ಸಾ. 7** |
| **ವಯಸ್ಸು** | **:** | **53 ವರ್ಷ** | **ದಿನಾಂಕಃ 10-10-2025** |
| **ಉದ್ಯೋಗ** | **:** | **ಮುಖ್ಯಪೇದೆ** | |
| **ವಾಸಸ್ಥಳ** | **:** | **ಸುಲೇಪೇಟ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕ 03-04-2020 ರಿಂದ ಇಲ್ಲಿಯವರೆಗೆ ಸುಲೇಪೇಟ ಪೋಲಿಸ ಠಾಣೆಯಲ್ಲಿ ಮುಖ್ಯಪೇದೆ ಆಗಿ ಕಾರ್ಯನಿರ್ವಹಿಸುತ್ತಿದ್ದೇನೆ.

ದಿನಾಂಕಃ 21-09-2020 ರಂದು ರಾತ್ರಿ 9-45 ಗಂಟೆಗೆ ಚಾಸಾ 1 ರವರು ನಮ್ಮ ಠಾಣೆಗೆ ಹಾಜರಾಗಿ ಒಂದು ಹೇಳಿಕೆಯ ದೂರನ್ನು ಹಾಜರುಪಡಿಸಿದ್ದು ಸದರ ದೂರಿನ ಸಾರಾಂಶದ ಮೇರೆಗೆ ಠಾಣೆ ಗುನ್ನೆ ಸಂಖ್ಯೆಃ 63/2020 ರಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ್ದೇನೆ.

ಈಗ ನೋಡುತ್ತಿರುವ ನಿಪಿ-1ರ ದೂರಿನಲ್ಲಿ ನನ್ನ ಸಹಿಗಳು ಇವೆ, ನನ್ನ ಸಹಿಗಳನ್ನು ನಿಪಿ-1(ಬಿ) ಮತ್ತು ನಿಪಿ-1(ಸಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ-6 ಎಂದು ಗುರುತಿಸಲಾಯಿತು.

ದಿನಾಂಕಃ 22-09-2020 ರಂದು ಬೆಳಿಗ್ಗೆ 09-30 ರಿಂದ 10-30 ರವರೆಗೆ ಚಾಸಾ-1 ರವರು ತೋರಿಸಿದಂತೆ ಚಾಸಾ-2 ಮತ್ತು 3 ರವರ ಸಮಕ್ಷಮ ಸ್ಥಳದ ಪಂಚನಾಮೆಯನ್ನು ಮಾಡಿ ಸ್ಥಳದಿಂದ ಒಂದು ಕಬ್ಬಿಣದ ರಾಡು ಹಾಗೂ ಒಂದು ಬಡಿಗೆಯನ್ನು ಜಪ್ತಿ ಮಾಡಿದ್ದೇನೆ. ಪಂಚನಾಮೆ ಸಮಯಕ್ಕೆ ನಿಪಿ-2ರ ಭಾವಚಿತ್ರವನ್ನು ಪಡೆದಿದ್ದೇನೆ. ನಿಪಿ-3ರ ಪಂಚನಾಮೆಯಲ್ಲಿರುವ ನನ್ನ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಮು.ಮಾ. 1 ಮತ್ತು 2 ಪಂಚನಾಮೆ ಕಾಲಕ್ಕೆ ಜಪ್ತಿ ಮಾಡಿದ್ದೇನೆ.

ಅದೇ ದಿನ ಚಾಸಾ-4 ರಿಂದ 7 ರವರ ಹೇಳಿಕೆಗಳನ್ನು ಪಡೆದಿದ್ದೇನೆ. ಈಗ ನೋಡುತ್ತಿರುವ ನಿಪಿ-4 ಮತ್ತು 5ರ ಹೇಳಿಕೆಗಳನ್ನು ನಾನೇ ಪಡೆದಿದ್ದೇನೆ.

ನಂತರ ಆರೋಪಿತರ ಜಾಮೀನು ಆದೇಶವನ್ನು ಪಡೆದಿದ್ದೇನೆ. ದಿನಾಂಕಃ 15-10-2020 ರಂದು ಚಾಸಾ-8 ರವರಿಂದ ಪ್ರಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದಿದ್ದೇನೆ. ಸದರಿ ಗಾಯದ ಪ್ರಮಾಣ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-7 ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-7(ಎ) ಎಂದು

ಗುರುತಿಸಲಾಯಿತು.

ದಿನಾಂಕಃ 15-10-2020 ರಂದು ತನಿಖೆ ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ SBH ವಕೀಲರಿಂದಃ**

ಆ ದಿನ ನಾನು ಮಧ್ಯಾಹ್ನ 2 ರಿಂದ ರಾತ್ರಿ 8 ಗಂಟೆವರೆಗೆ ಠಾಣಾಧಿಕಾರಿ ಕರ್ತವ್ಯದಲ್ಲಿದ್ದೆ. ದೂರು ನೀಡಲು ಚಾಸಾ-1, ಅವರ ತಾಯಿ ಹಾಗೂ ತಂದೆ ಬಂದಿದ್ದರು. ದೂರು ನೀಡಿದ ದಿನದಂದು ಚಾಸಾ-1ರವರ ತಂದೆ ತಾಯಿಯ ಹೇಳಿಕೆಯನ್ನು ಪಡೆದಿಲ್ಲ. ಮೊದಲು ಚಾಸಾ-1ರವರು ಆಸ್ಪತ್ರೆಗೆ ಹೋಗಿ ನಂತರ ದೂರು ನೀಡಿರುತ್ತಾರೆ. ಪಂಚನಾಮೆ ಮಾಡಲು ಠಾಣೆಯಿಂದ ಬೆಳಗ್ಗೆ 8 ಗಂಟೆಗೆ ಹೋರಟಿರುತ್ತೇನೆ. ಠಾಣೆಯಿಂದ ನೇರವಾಗಿ ಗುನ್ನೆ ಸ್ಥಳಕ್ಕೆ ಹೋಗಿರುತ್ತೇನೆ. ದೂರುದಾರ ಹಾಗೂ ಪಂಚರನ್ನು ಯಲಕಪಳ್ಳಿಯಿಂದ ಕರೆದುಕೊಂಡು ಸ್ಥಳಕ್ಕೆ ಹೋಗಿರುತ್ತೇನೆ. ಪಂಚರನ್ನು ನಾನು ಕರೆದಿದ್ದೇನೆ. ಪಂಚನಾಮೆಯಲ್ಲಿರುವ ನಕಾಶೆಯನ್ನು ನಮ್ಮ ಬರಹಗಾರರು ಬರೆದಿದ್ದಾರೆ. ಆ ದಿನ ನನ್ನ ಜೊತೆ ನಮ್ಮ ಠಾಣಾ ಬರಹಗಾರರು ಸಹ ಇದ್ದರು.

ಗುನ್ನೆ ಸ್ಥಳದ ಪೂರ್ವ ದಿಕ್ಕಿಗೆ ಯಲಕಪಳ್ಳಿ ರಸ್ತೆ ಇದೆ ಎಂದರೆ ಸಾಕ್ಷಿ ಸರಕಾರಿ ಪ್ರೌಢ ಶಾಲೆ ಇದೆ ಎಂದು ನುಡಿಯುತ್ತಾರೆ. ಗುನ್ನೆ ಸ್ಥಳದ ಪಶ್ಚಿಮ ದಿಕ್ಕಿಗೆ ಹೂವಿನ ಬಾವಿ ರಸ್ತೆ ಇದೆ ಎಂದರೆ ಸಾಕ್ಷಿ ದೂರುದಾರರ ಹೊಲ ಇದೆ ಎಂದು ನುಡಿಯುತ್ತಾರೆ. ಗುನ್ನೆ ಸ್ಥಳದ ಉತ್ತರ ದಿಕ್ಕಿಗೆ ಸರಕಾರಿ ಪ್ರೌಢ ಶಾಲೆ ಇದೆ ಎಂದರೆ ಸಾಕ್ಷಿ ಹೂವಿನ ಬಾವಿಗೆ ಹೋಗುವ ರಸ್ತೆ ಇದೆ ಎಂದು ನುಡಿಯುತ್ತಾರೆ. ಗುನ್ನೆ ಸ್ಥಳದ ದಕ್ಷಿಣ ದಿಕ್ಕಿಗೆ ದೂರುದಾರರ ಹೊಲ ಇದೆ ಎಂದರೆ ಸಾಕ್ಷಿ ಅದು ಪಶ್ಚಿಮ ದಿಕ್ಕಿಗೆ ಇದೆ ಎಂದು ನುಡಿಯುತ್ತಾರೆ. ಪಂಚನಾಮೆ ಮಾಡಲು ಹೋದಾಗ ನಾವು 4 ಜನರು ಬಿಟ್ಟು ಬೇರೆ ಯಾವುದೇ ವ್ಯಕ್ತಿಗಳು ಇರಲಿಲ್ಲ. ಸಾಕ್ಷಿದಾರರನ್ನು ಠಾಣೆಗೆ ಕರೆಸಿ ಹೇಳಿಕೆಗಳನ್ನು ಪಡೆದಿದ್ದೇನೆ.

ದೂರಿನ ಪ್ರಕಾರ ಘಟನೆ 9 ಗಂಟೆಗೆ ಆಗಿದ್ದರೇ ಗಾಯದ ಪ್ರಮಾಣ ಪತ್ರದಲ್ಲಿ ರಾತ್ರಿ 8.20 ಗಂಟೆ ಎಂದು ಉಲ್ಲೇಖವಿದೆ ಎಂದು ಸೂಚಿಸಿದಾಗ ಸಾಕ್ಷಿ ಚಾಸಾ-1ರವರು ಆಸ್ಪತ್ರೆಗೆ ಹೋಗಿ ನಂತರ ಠಾಣೆಗೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರು ಸಹ ಚಾಸಾ-1ರವರ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿ ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ.**